**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 622/2019**

**ಸಿ.ಡಬ್ಲ್ಯೂಃ 6 ಪಿ.ಡಬ್ಲ್ಯೂಃ 4**

**ಸಾಕ್ಷಿಗೆ ದಿನಾಂಕಃ 13.05.2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

## ಪಾಟೀ ಸವಾಲುಃ ಆರೋಪಿ ನಂ 1 ಪರ ಶ್ರೀ ಎಂ ಬಿ ಜೆ ವಕೀಲರಿಂದ

1. ನಾನು ಬಿ ಕಾಂ ಪದವಿದರನಾಗಿದ್ದೆನೆ. ನನಗೆ ಚಾಸಾ 1, 4, 5, 7 ಮತ್ತು 8 ರ ತಂದೆಯ ಹೆಸರು ಹಾಗೂ ವಿಳಾಸ ಹೇಳಲು ಅಗುವುದಿಲ್ಲ. ನನಗೆ ಚಾಸಾ 5 ಮತ್ತು 8 ರವರ ವಿವರ ಗೊತ್ತಿಲ್ಲ. ಅಡಿಟರ್ ನಾಗನಗೌಡರವರ ಕಚೇರಿ ಬಳ್ಳಾರಿಯಲ್ಲಿ ಇದೆ ಎಂದರೆ ಸರಿಯಲ್ಲ. ಸಿರುಗುಪ್ಪದಲ್ಲಿ ಇರುತ್ತದೆ. ಅವರ ಬಳಿ ನಾನು ಜೂನ್ 2015 ರಿಂದ ಅಕ್ಟೋಬರ್ 2016 ರವರೆಗೆ ಕೆಲಸ ಮಾಡಿದ್ದೆನೆ. ಅವರ ಬಳಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆಯನ್ನು ತನಿಖಾಧಿಕಾರಿಗೆ ಕೊಟ್ಟಿಲ್ಲ.

2. ಚಾಸಾ 1 ರವರು ದೂರನ್ನು ಮೊದಲು ನ್ಯಾಯಾಲಯಕ್ಕೆ ಸಲ್ಲಿಸಿದ್ದರೋ ಅಥವಾ ಠಾಣೆಗೆ ಸಲ್ಲಿಸಿದ್ದರೋ ಗೊತ್ತಿಲ್ಲ. ಈ ಪ್ರಕರಣದ ವಿಚಾರವಾಗಿ ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿದಾಗ ದೂರಿನ ಬಗ್ಗೆ ಗೊತ್ತಾಯಿತು. ಠಾಣೆಯಲ್ಲಿ ಪೋಲಿಸರು ಮಾತ್ರ ಇದ್ದರು. ಠಾಣೆಗೆ ಹೋದ ದಿನಾಂಕ 28.01.2018 ಆಗಿತ್ತು. ಪೋಲಿಸರು ಏನು ಹೇಳಿಕೆ ಬರೆದುಕೊಂಡರು ಎಂದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ಪೋಲಿಸರು ಓದಿ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ಕನ್ನಡದಲ್ಲಿ ಬರೆದುಕೊಂಡಿದ್ದಾರೆ. ಈ ಪ್ರಕರಣದಲ್ಲಿ ಯಾವ

ಚೆಕ್ಕು, ಯಾರ ಹೆಸರಿನಲ್ಲಿ, ಎಷ್ಟು ಹಣಕ್ಕೆ ಕೊಟ್ಟಿದ್ದಾರೆ ಎಂದು ಸಂಪೂರ್ಣವಾಗಿ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನಗೆ ಕೊಟ್ಟ ಚೆಕ್ ಬಗ್ಗೆ ಗೊತ್ತು. ನನಗೆ ಕೊಟ್ಟ ಚೆಕ್ ಸೆಲ್ಫ್ ಚೆಕ್ ಆಗಿತ್ತು. ಅದನ್ನು 1 ನೇ ಆರೋಪಿ ನನಗೆ ಕೊಟ್ಟಿದ್ದರು.

3. ನಾನು ಕೃಷ್ಣಾ ಗ್ಯಾಸ್ ಕಂಪನಿಯಲ್ಲಿ ಕೆಲಸಗಾರ ಅಲ್ಲ ಎಂದರೆ ಸರಿ. ಆರೋಪಿ ನಂ 1 ರವರು ಕೃಷ್ಣಾ ಗ್ಯಾಸ್ ಪಾಲುದಾರಿಕೆಯಿಂದ ಹೊರ ಬಂದ ಬಗ್ಗೆ ನಾನು ದಾಖಲೆ ನೋಡಿಲ್ಲ. 1 ನೇ ಆರೋಪಿ ನನ್ನ ಕೈಯಲ್ಲಿ ಚೆಕ್ ನೀಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ಈ ಪ್ರಕರಣದ ಬಗ್ಗೆ ನನಗೆ ಯಾವ ಕಾಲಕ್ಕೂ ಏನನ್ನು ಹೇಳಿಲ್ಲ ಎಂದರೆ ಸರಿ. ನಿಪಿಃ 18 ಚೆಕ್ ನಲ್ಲಿರುವ ಬರವಣಿಗೆ ಯಾರದ್ದು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ಹಣವನ್ನು ಬಿಡಿಸಿಕೊಂಡು ಬಂದ ನಂತರ ಅದರ ಬಗ್ಗೆ ನಾನು ಚಾಸಾ 1 ರವರಿಗಾಗಲಿ ಅಥವಾ ಆರೋಪಿ ನಂ 1 ರವರಾಗಲಿ ಹೇಳಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ನಾನು ಚಾಸಾ 1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ನಂ 2 ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಲಸಲಾಯಿತು.**

**ಮರು-ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**